<u>ಅಸಲು ದಾವಾ ಸಂಖ್ಯೆ **- 137/2023**</u> **ಪಿ.ಡಬ್ಲ್ಯೂ:-1**

ದಿನಾಂಕಃ **28-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು **:-2** ಮತ್ತು **3** ನೇ ಪ್ರತಿವಾದಿ ಪರ ವಕೀಲರಿಂದ **:-**</u>

ನಾನು ಈಗ ಗೋಪಗೊಂಡನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ಯಜಮಾನರಾದ ಹನುಮಂತಪ್ಪರವರು ಹರಿಹರ ತಾಲ್ಲೂಕಿನ ಹರಳಹಳ್ಳಿ ಗ್ರಾಮದ ವಾಸಿ. ದಾವಾ ಆಸ್ತಿಗಳು ನ್ಯಾಮತಿ ತಾಲ್ಲೂಕಿನ ಗೋಪಗೊಂಡನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ಮೂಲತಃ ನನ್ನ ತಂದೆಯಾದ ರಾಮಚಂದ್ರಪ್ಪರವರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. ನಾವು ಒಟ್ಟು ನಮ್ಮ ತಂದೆಗೆ 7 ಜನ ಮಕ್ಕಳು ಅಂದರೆ ಮಂಜಮ್ಮ, ಯಶೋಧಮ್ಮ, ಪರಮೇಶಪ್ಪ, ಚಂದ್ರಮ್ಮ, ಕೃಷ್ಣ ಮೂರ್ತಿ, ರಾಧಮ್ಮ ಮತ್ತು ಗಣೇಶ. ಯಶೋಧಮ್ಮ ಮದುವೆಯಾಗದೇ ಮೌತಿಯಾಗಿರುತ್ತಾರೆ. ಪ್ರತಿವಾದಿ 2 ರಿಂದ 4 ರವರು ಜುಬಾನಿ ಹಿಸ್ಸೆಯನ್ನು ಮಾಡಿಕೊಂಡು ದಾವಾ ಆಸ್ತಿಗಳಲ್ಲಿ ಸ್ವಾಧೀನಾನುಭವದಲ್ಲಿದ್ದುಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಕುಟುಂಬದಲ್ಲಿ ಯಾವುದೇ ಜುಬಾನಿ ಹಿಸ್ಸೆ ಆಗಿರುವುದಿಲ್ಲ ಆದರೆ 2 ರಿಂದ 4 ನೇ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ನುಡಿಯುತ್ತಾರೆ. ದಿಃ 03-07-2012 ರಲ್ಲಿ ದಾವಾ ಆಸ್ತಿಗಳನ್ನು ಜುಬಾನಿ ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯ ಸರ್ವೇ ನಂ.103 ರಲ್ಲಿ 2 ಎಕರೆ ಜಮೀನು, ದಾವಾ ಐಟಂ ನಂ.2 ರ ಆಸ್ತಿಯ ಸರ್ವೇ ನಂ.170 ರಲ್ಲಿ 2 ಎಕರೆ ಜಮೀನು, ಸರ್ವೇ ನಂ.169 ರಲ್ಲಿ ¾ ಎಕರೆ ಜಮೀನು ಇರುತ್ತದೆ. ದಾವಾ ಆಸ್ತಿಗಳು ಈಗ ನಮ್ಮ ತಂದೆ ರಾಮಚಂದ್ರಪ್ಪರವರು

ತೀರಿಕೊಂಡ ನಂತರ ಪೌತಿ ಖಾತೆಯ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ದಿಃ 17-03-2005 ರಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಗಳ ಖಾತೆ ಆಗಿರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.